ಓ.ಎಸ್. ನಂಬರ:-66 /2021

ಪಿ.ಢಬ್ಲೂ-:-1 : ವಿಜಯಲಕ್ಷ್ಮೀ ಗಂಡ ರಮೇಶ ಬಡಿಗೇರ

ತಂದೆ ಮಲ್ಲೇಶಪ್ಪ ಕಂಬಾರ

ದಿನಾಂಕ:- 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು : ೨ನೇ ಪ್ರತಿವಾದಿ ಪರ ಶ್ರೀ. ಆರ್ ಡಿ ಎಸ್ ವಕೀಲರಿಂದ :-***

ಭೀಮಶಾ ಯಾನೆ ಭೀಮಣ್ಣ ಕಂಬಾರ ನನ್ನ ಅಜ್ಜನಾಗಿರುತ್ತಾರೆ. ಸದರಿ ಭೀಮಶಾರವರು ನನ್ನ ತಂದೆಯಾಗಬೇಕು ಎಂದು ದಾವೆಯಲ್ಲಿ ಬರೆಸಿರುವುದು ತಪ್ಪಾಗಿರುತ್ತದೆ. ನಾನು ದಾವೆಯಲ್ಲಿ ತಿಳಿಸಿದ ವಂಶಾವಳಿ ಸರಿಯಾಗಿ ಇರುತ್ತದೆ. ನಾನು ಮತ್ತು ೨ನೇ ಪ್ರತಿವಾದಿ ದ್ಯಾವಮ್ಮ ಒಂದೆ ಕುಟುಂಬದ ಸದಸ್ಯರು ಆಗಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ಅಜ್ಜನಾದ ಭೀಮಶಾರವರ ಆಸ್ತಿಗಳು ಆಗಿವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ೨ನೇ ಪ್ರತಿವಾದಿಯಾದ ದ್ಯಾವಮ್ಮರವರಿಗೂ ಕೂಡಾ ಪಾಲು ಬರಬೇಕು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೆ ಯಾವುದೆ ರೀತಿ ಪಾಲು ಆಗಿಲ್ಲ ಎಂದರೆ ಸರಿ. ನನ್ನ ತಾಯಿ ಮೃತರಾದ ನಂತರ ಎಲ್ಲಾ ಆಸ್ತಿಗಳನ್ನು ಪಾರ್ವತಿರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಪಾರ್ವತಿರವರು ಈಗ ಮೃತರಾಗಿರುತ್ತಾರೆ. ಪಾರ್ವತಿರವರು ಜೀವಿತಾ ಇದ್ದಾಗಲೂ ಕೂಡಾ ಯಾವುದೆ ಪಾಲು ಆಗಿಲ್ಲ ಎಂದರೆ ಸರಿ.

೨. ೩ ರಿಂದ ೭ನೇ ಪ್ರತಿವಾದಿಗಳು ನನ್ನ ಮತ್ತು ೨ನೇ ಪ್ರತಿವಾದಿಯ ಒಪ್ಪಿಗೆ ಪಡೆಯದೆ ತಮ್ಮ ಹೆಸರಿನಲ್ಲಿ ಜಮೀನುಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು ಮಾಡಿಕೊಂಡ ಮುಟೇಷನಗಳಿಗೆ ನನ್ನ ಮತ್ತು ೨ನೇ ಪ್ರತಿವಾದಿಯ ತಕರಾರು ಇರುತ್ತದೆ ಎಂದರೆ ಸರಿ. ನನ್ನ ಮದುವೆಯಾದ ಮೇಲೆ ನಾನು ಗಂಡನ ಮನೆಯಲ್ಲಿ ವಾಸ ಇದ್ದೆ ಎಂದರೆ ಸರಿ. ನಾನು ಈಗ

ಗಾಣಗಾಪೂರದ ದಾವಾ ಜಮೀನಿನಲ್ಲಿಯೆ ಪತ್ರಾಸ ಸೆಡ್ ಹಾಕಿಕೊಂಡು ವಾಸವಿರುತ್ತೇನೆ. ನಾನು ಕಳೆದ ೨ ವರ್ಷಗಳಿಂದ ಅಲ್ಲಿ ವಾಸವಿರುತ್ತೇನೆ. ಸದರಿ ಜಮೀನು ನಾನೇ ಬಿತ್ತುವುದು ಮತ್ತು ಬೆಳೆಯುವುದು ಮಾಡಿಕೊಳ್ಳುತ್ತೇನೆ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.